

**ದುರ್ಯೋಧನ:** ಕ್ಷತ್ತ, ಬಾ ಇಲ್ಲಿ. ಆ ದ್ರೌಪದೀನ ಕರಕೊಂಡು ಬಾ ಇಷ್ಟದ ಹೆಂಡತಿ ಪಾಂಡವರ ಮೆಚ್ಚಿನೋಳು ಮನೆ ಗುಡಿಸಿಕೊಂಡು ಮನೆ ಆಳುಗಳ ಜತೆ ನಡತೆ ಕೆಟ್ಟವಳೂ ಇದ್ದುಕೊಂಡಿರಲಿ.

**ವಿದುರ:** ನಿನ್ನಂಥವರಿಂದ ಆಗಬಾರದ್ದು ಆಗತ್ತೆ ವಿವೇಕ ಇಲ್ಲದವನು, ಕುತ್ತಿಗೇಲಿ ಕುಣಿಕೆ ಬಿದ್ದಿರೋದು ಗೊತ್ತಾಗತಾ ಇಲ್ಲ ಕಮರೀಲಿ ನೇತಾಡತಿದೀಯ, ಗೊತ್ತಾಗಿಲ್ಲ ಹುಲ್ಲೇಕರ, ಹುಲಿಗಳನ್ನೇ ಕೆಣಕತಾ ಇದೆ

ನಿನ್ನ ನೆತ್ತಿ ಮೇಲೆ ಹಾವು ವಿಷ ತುಂಬಿಕೊಂಡು ಬುಸುಗುಡತಾ ಇದೆ
ಅದನ್ನ ಕೆರಳಿಸಬೇಡ ಮಂಕೇ
ನಾಶ ಆಗಿ ಯಮನ್ನ ಸೇರತೀಯ
ಕೃಷ್ಣೆ ಇನ್ನೂ ನಿನದಾಸಿ ಆಗಿಲ್ಲ. ಆಗೋದೂ ಇಲ್ಲ. ಅವಳನ್ನ ಪಣಕ್ಕಿಡುವಾಗ

ರಾಜನಿಗೆ ತನ್ನ ಮೇಲೇ ಒಡೆತನ ಇರಲಿಲ್ಲ. ಆದರಿವನಿಗೆ ಮದ ಏರಿದೆ, ಬಂದಿರೋ ಕೊನೆಗಾಲ ಕಾಣತಾ ಇಲ್ಲ.

ಧೃತರಾಷ್ಟ್ರನ ಮಗ ಫಲ ಬಿಟ್ಟ ಕಣಪ್ಪೊಬಂಬು ಫಲ ಬಿಟ್ಟ ಹಾಗೆ ತನ್ನ ಕೇಡುಗಾಲಕ್ಕೆ. ಎಲ್ಲಾ ಕಳಕೊಂಡವನನ್ನ ಹೀನಾಯ ಮಾಡಬಾರದು.

ಬೇರೇವರಿಗೆ ಗಾಯ ಮಾಡೋ ಮಾತೂ ಕೂಡದು. ನರಕಕ್ಕೆ ಇಳಿಸುತ್ತೆ ಅದು. ಪಾಂಡವರಲ್ಲಿ ವೈರ ತೆಗೀಬೇಡ. ಆಡು ನೆಲಗುದ್ದಿ ಹೂತು ಹೋಗಿದ್ದ ಕತ್ತೀನ ತೆಗೀತಂತೆ. ಅದೇ ಕತ್ತಿ ಅದರ ಕುತ್ತಿಗೇನ ಕತ್ತರಿಸಿತಂತೆ.

ಸೋರೆ ಬುರುಡೆ ಮುಳುಗತಾವೆ. ಕಲ್ಲು ಬಂಡೆ ತೇಲತಾವ
ಹಡಗು ಕಡಲಲ್ಲಿ ದಾರಿ ತಪ್ಪಿ ಮರೆಯಾಗತಾವೆ
ಧೃತರಾಷ್ಟ್ರನ ಮಗ ಮೂಢ ನನ್ನ ಮಾತು ಅವನಿಗೆ ಪಥ್ಯ ಆಗತಿಲ್ಲ
ದುರಾಸೆ ಬೆಳೀತಿದೆ. ಕುರುಗಳಿಗೆ ಕೊನೆಗಾಲ ಬರತಾ ಇದೆ
ಎಲ್ಲವೂ ನಾಶ ಆಗೋ ಘೋರ ವಿನಾಶ ಇಣುಕುತ್ತಿದೆ
ಸಖನಾದ ಕವಿ ಕಂಡ ಮುನ್ನೋಟದ ಮಾತ ಯಾರು ಕೇಳತಾ ಇಲ್ಲ

***

ದರ್ಪದ ಮದವೇರಿದ ಧೃತರಾಷ್ಟ್ರನ ಮಗ, 'ತ್ಥು ಈ ಕ್ಷತ್ತಾರನ್ನ ತಂದು...' ಅಂತ ಅನ್ನುತ್ತಾ ಸಭೆಯನ್ನ ನೋಡತಾ, ಹಿರೀಕರ ನಡುವೆ ಕೂತವನು ತನ್ನ ದೂತನಿಗೆ ಹೀಗಂದ:

**ದುರ್ಯೋಧನ:** ಲೋ ದೂತ... ಹೋಗಿ ದ್ರುಪದನ ಮಗಳನ್ನ ಕರಕೊಂಡು ಬಾರೋ. ಈ ಪಾಂಡವರಿಗೆ ಹೆದರಿಕೋ ಬೇಡ ಅವರಿಂದ ಯಾವ ಭಯವೂ ಇಲ್ಲ.

ಈ ಕ್ಷತ್ತ ಪುಕ್ಕಲ ಏನೇನೋ ದಡಬಡಿಸತಾನೆ. ನಮ್ಮ ಏಳಿಗೆ ಅವನಿಗೆ ಯಾವತ್ತೂ ಇಷ್ಟ ಇಲ್ಲ.

**ವೈಶಂಪಾಯನ:** ಈ ಮಾತಿಗೆ ಸೂತನಾದ ಆ ದೂತನು ರಾಜಾಜ್ಞೆ ಅಂತ ಬೇಗ ಬೇಗ ಹೊರಟ
ನಾಯಿ ಸಿಂಹದ ಗವೀ ಹೊಕ್ಕ ಹಾಗೆ ಪಾಂಡವರ ರಾಣಿ ಹತ್ತಿರ ಬಂದ

**ದೂತ:** ಯುಧಿಷ್ಠಿರ ಜೂಜಿನ ಹುಚ್ಚಲ್ಲಿ ನಿಶೇ ಏರಿ
ನಿನ್ನನ್ನ ದುರ್ಯೋಧನನಿಗೆ ಸೋತುಬಿಟ್ಟ ದ್ರೌಪದೀ
ಅದಕ್ಕೇ ನೀನು ಬರಬೇಕು ಧೃತರಾಷ್ಟ್ರನ ಸಭ್ಯರ ಸಭೆಗೆ
ಕರಕೊಂಡು ಹೋಗತೀನಿ, ನನ್ನ ಕೆಲಸ ಅದು ಯಜ್ಞಸೇನೀ

**ದ್ರೌಪದಿ:** ನೀನು ಇಂಥಾ ಮಾತಾಡಬಹುದಾ
ಎಲ್ಲಾದರೂ ಹೆಂಡತೀರ್ನು ರಾಜಕುಮಾರರು ಪಣ ಇಡತಾರ
ರಾಜ ಆಟದ ಮತ್ತಲ್ಲಿ ಕಣ್ಣು ಕಾಣದಷ್ಟು ಮೂಢ ಆದನಾ
ಪಣ ಇಡೋಕೆ ಇನ್ನೇನು ಸಿಗಲಿಲ್ಲವಾ ಅವನಿಗೆ

**ದೂತ:** ಇನ್ನೇನೂ ಪಣ ಇಲ್ಲದೆ ಹೋದ ಮೇಲೇನೇ
ಆ ಅಜಾತಶತ್ರು ಪಾಂಡು ಮಗ ನಿನ್ನನ್ನ ಪಣ ಇಟ್ಟ

ಅದಕ್ಕೆ ಮೊದಲು ತನ್ನೆಲ್ಲ ಸಂಪತ್ತು, ಸಾಲದು ಎಂಬಂತೆ ತನ್ನ ತಮ್ಮದೀರನ್ನೂ ಇಟ್ಟ. ಆಮೇಲೆ ತನ್ನನ್ನೇ ಇಟ್ಟ ಆಮೇಲೆ ನಿನ್ನನ್ನ ರಾಜಪುತ್ರಿ.

**ದ್ರೌಪದಿ:** ಮೊದಲು ಆಟದ ಜಾಗಕ್ಕೆ ಹೋಗು.
'ನೀನು ಮೊದಲು ಯಾರನ್ನ ಸೋತೆ ನಿನ್ನನ್ನೋ ಅಥವಾ ನನ್ನನ್ನೋ' ಅಂತ

ಕೇಳು. ಅದನ್ನ ತಿಳಕೊಂಡು ಆಮೇಲೆ ಬಾ ನನ್ನ ಕರಕೊಂಡು ಹೋಗತೀಯಂತೆ. ಅದು ಗೊತ್ತಾದ ಮೇಲೆ ಬರತೀನಿ.

**ವೈಶಂಪಾಯನ:** ಅವನು ಸಭೆಗೆ ಬಂದ. ದ್ರೌಪದಿಯ ಮಾತನ್ನ ಅಂದ.

'ನೀನು ಯಾರಿಗೆ ಯಜಮಾನ ಆಗಿ ನನ್ನನ್ನ ಸೋತೆ ಅಂತ ಕೇಳತಾ ಇದಾಳೆ. ನೀನು ಮೊದಲು ನಿನ್ನ ಸೋತುಕೊಂಡೆಯೋ ಅಥವಾ ನನ್ನನ್ನೇಯೋ' ಅಂತ ಕೇಳಿದ ಯುಧಿಷ್ಠಿರ ಎಚ್ಚರವೇ ಇಲ್ಲದವನ ಥರ. ರಸವೇ ಬತ್ತಿ ಹೋದವನ ಥರ ಆಗಿಬಿಟ್ಟ. ಸೂತನ ಮಾತಿಗೆ ಉಹೂಂ ಅನ್ನಲ್ಲಿಲ್ಲ ಉಹುಂ ಅನ್ನಲ್ಲಿಲ್ಲ.

**ದುರ್ಯೋಧನ:** ಆ ಪಾಂಚಾಲದವಳು ಇಲ್ಲಿಗೇ ಬರಲಿ. ಬಂದು, ಅವಳೇ ಆ ಮಾತ ಮಾತಾಡಲಿ. ಅವಳದು ಇವನದು ಮಾತನ್ನ ಎಲ್ಲರೂ ಕೇಳಿಸಿಕೊಳ್ಳೋಣ.